DAB/DSB – 010

ದ್ವಿತೀಯ ಬಿ.ಎ./ಬಿ.ಎಸ್ಸಿ. ಪದವಿ ಪರೀಕ್ಷೆ, ಆಗಸ್ಟ್ /ಸೆಪ್ಟೆಂಬರ್ 2008

ಅಂಚೆ ಮತ್ತು ತೆರೆಯ ಶಿಕ್ಷಣ

ಕನ್ನಡ ಭಾಷಾ ಪತ್ರಿಕೆ – ೨

(ಪಠ್ಯಗಳು : ಪ್ರಾಚೀನ ಕನ್ನಡ ಕಾವ್ಯ – ೨, ತುಳುಲಕ್, ಅಯ್ದು ಸಣ್ಣ ಕಥೆಗಳು, ದೇವರು)

ಅವಧಿ: 3 ಗಂಟೆಗಳು

ಅಂಕಗಳು : 70

1. ಅ) ಒಂದರ ಭಾವಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ. (1×4=4)

೧) ಕಟ್ಟಿದ ಪಟ್ಟಮೆ ಸರವಿಗೆ

ನೆಟ್ಟನೆ ದೊರೆ ಪಿಡಿದ ಬಿಲ್ಲದಂಟಿಂಗೆಣೆ ಕ

ಣ್ಗಟ್ಟ ಮುದುಪಂಗೆ ಪಗೆವರ

ನಿಟ್ಟಿಲ್ದಂ ಮುಱೆವೊಡೆನಗೆ ಪಟ್ಟಂಗಟ್ಟಾ ॥

೨) ನನ್ನ ಪ್ರಜೆಗಳೇ, ಏಳಿರಿ, ಬನ್ನಿರಿ. ನಾನು ನಿಮಗಾಗಿ ಕಾದಿದ್ದೇನೆ. ನಿಮ್ಮ ಚಿಂತೆಗಳನ್ನು ನನಗೆ ಹೇಳಿರಿ. ನನ್ನ ಆಸೆಗಳನ್ನು ನಿಮಗೆ ಹೇಳುತ್ತೇನೆ. ನಿಮ್ಮೆಲ್ಲರೂ ಕೂಡಿ ದೇವರನ್ನು ಪ್ರಾರ್ಥಿಸೋಣ. ಗಂಟಲೊಡೆಯುವಂತೆ, ಮೈ ಕರಗುವಂತೆ, 'ರಕ್ತ' ಉಗಿಯಾಗುವಂತೆ ಪ್ರಾರ್ಥಿಸೋಣ. ಇತಿಹಾಸ ನಮ್ಮದು ! ನಮ್ಮದು!

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ. (½×8=4)

ಅಳವು, ರಿಪು, ಧುರ, ಅಡಗು, ತರಕ್ಷು, ರಜ, ಉದಧಿ, ಪ್ರೌಢ, ಪೃಥ್ವಿ, ಕಿರ್ಯಾದು, ದೀವಟಿಗೆ, ಬೇನೆ.

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ. (2×2=4)

ಅಲೋಕನೆ ವಿದ್ಯೆ, ಮಾರಿದತ್ತ, ಮಹಮ್ಮದ್ ನಪೇಲು.

2. ನಾಲ್ಕಕ್ಕೆ ಸಂದರ್ಭದೊಡನೆ ಸ್ವಾರಸ್ಯ ಬರೆಯಿರಿ. (3×4=12)

೧) ನಾಲಗೆ ಕುಲಮಂ ತುಬ್ಬುವವೊಲುಱದೆ ನೀಂ ಕೆಡೆನುಡಿವೈ.

೨) ನಿಜವಾದ ಅರಸು ಮನುಷ್ಯನಾಗಿದ್ದೇ ದೊಡ್ಡವನಾಗಬೇಕು.

೩) ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.

೪) ನೂರಾರು ಕಾಯಿಲೆಗಳ ಹುತ್ತವಾಗಿದೆ ನನ್ನ ರಾಜ್ಯ.

೫) ಕೂಸು ಇದ್ದ ಮನೆಗೆ ಬೀಸಣಿಕೆ ಯಾತಕ.

೬) ಅಗಸ ತೊಳೆದಷ್ಟು ಕೊಳೆಯನ್ನು ಯಾವ ಧರ್ಮ ಗುರುವೂ ತೊಳೆದಿಲ್ಲ.

P.T.O

3. ಅ) ಒಂದು ಪ್ರಶ್ನೆಗೆ ಉತ್ತರಿಸಿ. (1×8=8)

೧) ಮಾರಿದತ್ತನ ಮನಃಪರಿವರ್ತನೆಯಾದ ಬಗೆಯನ್ನು ವಿವರಿಸಿ.

೨) ಕೃಷ್ಣ-ಕರ್ಣರ ಸಂವಾದದಲ್ಲಿ ಕರ್ಣನ ಮೇಲಿನ ತೂಕ ಹೇಗೆ ಅಭಿವ್ಯಕ್ತಗೊಂಡಿದೆ ? ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ. (1×5=5)

೧) ಲೋಕದಲ್ಲಿದ್ದೂ ಆತ್ಮೋನ್ನತಿಯನ್ನು ಸಾಧಿಸುವ ಪ್ರಯತ್ನ ಅಕ್ಕನ ವಚನಗಳಲ್ಲಿ ಹೇಗೆ ಮೂಡಿ ಬಂದಿದೆ ?

೨) ಜನಪದ ಗೀತಗಳಲ್ಲಿ ವ್ಯಕ್ತವಾಗಿರುವ ಸತಿ-ಪತಿ ಸಂಬಂಧಗಳನ್ನು ಸ್ಪಷ್ಟಪಡಿಸಿ.

4. ಅ) ಒಂದು ಪ್ರಶ್ನೆಗೆ ಉತ್ತರಿಸಿ. (1×8=8)

೧) ಆದರ್ಶಗಳಿಗೆ ಮನಸೋತು ವಾಸ್ತವಕ್ಕೆ ಕುರುಡಾದ ತುಘಲಕನ ಪಾತ್ರವನ್ನು ವಿವೇಚಿಸಿ.

೨) ಅಝೀಝುನ ಪಾತ್ರವನ್ನು ಚಿತ್ರಿಸಿರಿ.

ಆ) ಒಂದು ಪಾತ್ರವನ್ನು ಕುರಿತು ಬರೆಯಿರಿ. (1×5=5)

೧) [illegible]

೨) ಆಝೂಂ [illegible]

5. ಒಂದು ಪ್ರಶ್ನೆಗೆ ಉತ್ತರಿಸಿ. (1×10=10)

೧) [illegible] ಕೊನೆಗೊಂಡ ಬಗೆಯನ್ನು ವಿವರಿಸಿ.

೨) [illegible] ಕಥೆಯ ಹೆಣಿಕೆಯಲ್ಲಿ ವಿವರಿಸಿ.

6. ಒಂದು ಪ್ರಶ್ನೆಗೆ ಉತ್ತರಿಸಿ. (1×10=10)

೧) ದೇವರನ್ನು ಕುರಿತು ಪ್ರಚಲಿತವಾಗಿರುವ ಕಥೆಗಳಲ್ಲಿ ದೇವರ ಸ್ವರೂಪ ಹೇಗೆ ಮೂಡಿ ಬಂದಿದೆ ?

೨) ದೇವರ ಸೃಷ್ಟಿಯ ಹಿಂದೆ ಇರುವ ಮನುಷ್ಯ ವ್ಯಾಪಾರದ ಮನೋಭಾವವನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ ?